# ವೇದ ಸಾಹಿತ್ಯಕ್ಕೆ ದೃಶ್ಯಕಲೆಯ ಸ್ಪರ್ಶ



ಗಣಪತಿ ಹೆಗಡೆ







**ಪುರಾತನ ವೇದ ಸಾಹಿತ್ಯಕ್ಕೆ ನವ್ಯ ಕಲೆಯ ಸ್ಪರ್ಶ ಕೊಟ್ಟವರು ಕಲಾವಿದ ಗಣಪತಿ ಹೆಗಡೆ. ವೇದ ಸಾಹಿತ್ಯವನ್ನಾಧರಿಸಿ ರೂಪುಗೊಂಡ ಇವರ ಕಲಾಕೃತಿಗಳು ಆಸಕ್ತಿದಾಯಕವಾಗಿವೆ.**

**■ ದತ್ತಾತ್ರೇಯ ಎನ್‌ ಭಟ್ಟ**

ವೇದ ಸಾಹಿತ್ಯವನ್ನು ತಮ್ಮ ಚಿತ್ರಕಲೆಯ ಮೂಲಕ ದೃಶ್ಯರೂಪದಲ್ಲಿ ಕಟ್ಟಿಕೊಡುವ ಹಂಬಲದೊಂದಿಗೆ ಹಲವು ಕಲಾಕೃತಿಗಳನ್ನು ಮೂಡಿಸಿದ್ದಾರೆ ಕಲಾವಿದ ಗಣಪತಿ ಎಸ್. ಹೆಗಡೆ.

ವೇದ ಸಾಹಿತ್ಯದ ಸಾಂಗತ್ಯವಿರುವ ಕುಟುಂಬದಲ್ಲೇ ಹುಟ್ಟಿ ಬೆಳೆದ ಗಣಪತಿಯವರಿಗೆ ಎಳೆವಯಸ್ಸಿನಿಂದಲೂ ವೇದ ಮಂತ್ರಗಳು ಗಾಢ ಪ್ರಭಾವ ಬೀರಿದ್ದವು. ವೇದ ಮಂತ್ರಗಳ ಉದ್ದೇಶವನ್ನು, ಅವುಗಳ ಅರ್ಥ–ಹಿನ್ನೆಲೆಯನ್ನು ಅರಿತಿದ್ದ ಗಣಪತಿ ಅವರಿಗೆ ವೇದ ಸಾಹಿತ್ಯವನ್ನು ಕ್ಯಾನ್ವಾಸ್ ಮೇಲೆ ಅಭಿವ್ಯಕ್ತಪಡಿಸುವ ಅಭಿಲಾಷೆ. ಆ ಹಂಬಲದೊಂದಿಗೆ ವೇದ ಸಾಹಿತ್ಯದ ಹೂರಣವಿರುವ ಸುಮಾರು ಐವತ್ತು ಕಲಾಕೃತಿಗಳನ್ನು ರಚಿಸಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಮೂರೂರು ಮೂಲದ ಗಣಪತಿ ಹೆಗಡೆಯವರು ಕೃಷಿ ಕುಟುಂಬದವರು. ಎಸ್‌ಎಸ್‌ಎಲ್‌ಸಿ ನಂತರ ಚಿತ್ರಕಲೆ ಕಲಿಕೆಯಲ್ಲಿ ತೊಡಗಿದ ಇವರು, ದಾವಣಗೆರೆ ಸರ್ಕಾರಿ ಕಲೆ ಹಾಗೂ ಕರಕುಶಲ ಶಾಲೆಯಲ್ಲಿ (ಈಗಿನ ಯೂನಿವರ್ಸಿಟಿ ಕಾಲೇಜ್ ಆಫ್ ವಿಷುವಲ್ ಆರ್ಟ್ಸ್) ಚಿತ್ರಕಲೆಯಲ್ಲಿ ಡಿಪ್ಲೊಮಾ ಪಡೆದವರು.

ವಿ.ಬಿ. ಹಿರೇಗೌಡರ್, ಶಂಕರ್ ಪಾಟೀಲ್, ವೈ.ಎಚ್. ಸೂಗೂರರಂಥ ಚಿತ್ರಕಲಾವಿದರ ಮಾರ್ಗದರ್ಶನದಲ್ಲಿ ಚಿತ್ರಕಲೆಯ ಕೌಶಲ–ತಂತ್ರಗಾರಿಕೆ ಕುರಿತು ಅರಿತುಕೊಂಡರು. ಬೆಂಗಳೂರಿನ ಬಿಇಎಂಎಲ್ ಉದ್ಯೋಗಿಯಾಗಿ ಸೇವೆ ಸಲ್ಲಿಸಿ, ನಿವೃತ್ತರಾಗಿರುವ ಗಣಪತಿಯವರು ಸದ್ಯ ಚಿತ್ರರಚನೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡು ಹಲವು ಕಲಾ ಪ್ರಯೋಗಗಳಲ್ಲಿ ಉತ್ಸಾಹದಿಂದ ತೊಡಗಿಕೊಂಡಿದ್ದಾರೆ.

ರುದ್ರ ನಮಕ–ಚಮಕ, ದುರ್ಗಾ ಸೂಕ್ತ, ಅಗ್ನಿ, ವಾಯು, ವರುಣ, ಇಂದ್ರಾದಿ ದೇವತೆಗಳ ಕುರಿತ ಮಂತ್ರಗಳನ್ನು ಆಧರಿಸಿ ಹಲವು ಚಿತ್ರಗಳನ್ನು ಬಿಡಿಸಿದ್ದಾರೆ. ನವ್ಯಶೈಲಿಯಲ್ಲಿ ಈ ಚಿತ್ರಗಳನ್ನು ಅಭಿವ್ಯಕ್ತಿಸಿದ್ದು ವಿಶೇಷ. ಕೃತಿಗಳಲ್ಲಿ ಬಣ್ಣ ಒದ್ದೆಯಾಗಿರುವಾಗಲೇ ತೆಳುವಾದ ಪ್ಲಾಸ್ಟಿಕ್ ಹಾಳೆಗಳನ್ನು ಬೇರೆ ಬೇರೆ ನಮೂನೆಯಲ್ಲಿ ಒತ್ತಿ, ಬಗೆಬಗೆಯ ತಂತ್ರಗಾರಿಕೆ ಅನುಸರಿಸಿ ಚಿತ್ರಗಳಲ್ಲಿ ಮೈವಳಿಕೆ ರೂಪಿಸಿದ್ದಾರೆ. ವರ್ಣ ವೈವಿಧ್ಯ–ಮೈವಳಿಕೆ ವೈವಿಧ್ಯಗಳನ್ನು ದಟ್ಟಣೆಗೊಳಿಸಿ ಕಲಾಕೃತಿಗಳನ್ನು ರಚಿಸಿದ್ದಾರೆ.

ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿ 'ಕೋಬಾಲ್ಟ್ ಗ್ಯಾಲರಿ' ಎಂಬ ಕಲಾ ಗ್ಯಾಲರಿ ಆರಂಭಿಸಿರುವ ಇವರು, ತನ್ಮೂಲಕ ಸ್ಥಳೀಯ ಕಲೆ–ಸಾಂಸ್ಕೃತಿಕ ಚಟುವಟಿಕೆಗಳಿಗೆ, ಕಲಾ ಪ್ರತಿಭೆಗಳಿಗೆ ಅವಕಾಶ ಒದಗಿಸಿಕೊಡುತ್ತಿದ್ದಾರೆ. ತಮ್ಮ ಸುತ್ತಲಿನ ಪರಿಸರದಲ್ಲಿ ಕಲೆ–ಸಾಂಸ್ಕೃತಿಕ ವಾತಾವರಣ ನೆಲೆಗೊಳ್ಳುವಂತೆ ಮಾಡುವ ಪುಟ್ಟ ಪ್ರಯತ್ನ ತಮ್ಮದು ಎನ್ನುತ್ತಾರೆ.



ಪ್ರತಿಕ್ರಿಯಿಸಿ: feedback@sudha.co.in